<u>೧ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪಾಂಡವಪುರ.</u>

**<u>ಸಿ.ಸಿ. 398/2023</u>**

<u>ಸಾಕ್ಷಿದಾರರ ಹೇಳಿಕೆ ಃ</u>

| | | | |
|---|---|---|---|
| ಹೆಸರು | ಃ ರಂಜು ಹೆಚ್.ಕೆ. | ಚಾಸಾಃ **1** | ಪ್ರಾಸಾಃ **1** |
| ತಂದೆಯ ಹೆಸರು | ಃ ಕೃಷ್ಣೇಗೌಡ | | |
| ವಯಸ್ಸು | ಃ 32 ವರ್ಷ | | |
| ವೃತ್ತಿ | ಃ ಚಾಲಕ | | |
| ವಾಸಸ್ಥಳ | ಃ ಹಿರೇಮರಳಿ ಗ್ರಾಮ | | |

ದಿನಾಂಕಃ **22.09.2025** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ.ರವರಿಂದ ಃ</u>

**01**. ಆರೋಪಿ ನನಗೆ ಗೊತ್ತಿಲ್ಲ. ಆತನನ್ನು ನಾನು ಈ ಹಿಂದೆ ನೋಡಿರುವುದಿಲ್ಲ. ಮೃತ ವೆಂಕಟೇಗೌಡ ನನ್ನ ಸಂಬಂದಿಕರು. ಆತ ಅಪಘಾತದಲ್ಲಿ ತೀರಿಕೊಂಡಿದ್ದಾರೆ. ಅಪಘಾತವು ಹೇಗೆ, ಯಾವ ರೀತಿ ಹಾಗೂ ಯಾರ ನಿರ್ಲಕ್ಷ್ಯತನದಿಂದ ಉಂಟಾಗಿರುತ್ತದೆ ಎಂಬುದು ನನಗೆ ಗೊತ್ತಿಲ್ಲ. ಈ ಸಂಬಂಧ ನಾನು ಪೊಲೀಸರಿಗೆ ಯಾವುದೇ ದೂರನ್ನು ಕೊಟ್ಟಿಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ದೂರು ಅರ್ಜಿ ಆಗಿದ್ದು, ಅದನ್ನು ಈಗ ನಿಪಿ-**1** ಎಂದು, ಸಾಕ್ಷಿಯ ಸಹಿಯನ್ನು ನಿಪಿ-**1(**ಎ**)** ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು,

ಸದರಿ ದಾಖಲೆಯು ಮಹಜರ್ ಆಗಿದ್ದು, ಅದನ್ನು ಈಗ ನಿಪಿ-**2** ಎಂದು, ಸಾಕ್ಷಿಯ ಸಹಿಯನ್ನು ನಿಪಿ-**2(ಎ)** ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ಅಮಾನತ್ತು ಮಹಜರ್ ನ ದಾಖಲೆಗಳನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಅಮಾನತ್ತು ಮಹಜರ್ ಗಳಾಗಿದ್ದು, ಅದನ್ನು ಈಗ ನಿಪಿ-**3** ಮತ್ತು **4** ಎಂದು, ಸಾಕ್ಷಿಯ ಸಹಿಯನ್ನು ನಿಪಿ-**3(ಎ)** ಮತ್ತು **4(ಎ)** ಎಂದು ಗುರುತಿಸಲಾಯಿತು. ನಿಪಿ-1 ರಿಂದ 3 ರಲ್ಲಿ ಬರೆದಿರುವ ವಿಚಾರಗಳು ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಕೃತ್ಯ ಸ್ಥಳವನ್ನು ತೋರಿಸಿಲ್ಲ, ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ. ಯಾವುದೇ ವಾಹನಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ. ಸಾಕ್ಷಿಯು ಆರು ಪೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-**5** ರಿಂದ **10** ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ.ರು ಅನುಮತಿ ಕೋರಿರುತ್ತಾರೆ. ಅನುಮತಿಸಲಾಯಿತು.)**

<u>ಪಾಟೀ ಸವಾಲು ಃ ಸ.ಸ.ಅ.ರವರಿಂದ ಃ</u>

**01**. ದಿನಾಂಕಃ 29.01.2023 ರಂದು ನಾನು ಆಟೋದಲ್ಲಿ ನಮ್ಮ ಗ್ರಾಮದ ವೆಂಕಟೇಗೌಡ, ಅವರ ಪತ್ನಿ ವಿಶಾಲಾಕ್ಷಿ ಮತ್ತು ತುಳಸಿ ಎಂಬುವವರನ್ನು ಕರೆದುಕೊಂಡು ಗವಿರಂಗನಾಥಸ್ವಾಮಿ ದೇವಸ್ಥಾನಕ್ಕೆ ಹೋಗಿದ್ದು, ವಾಪಸ್ಸು ಬರುವಾಗ ಶ್ರವಣ ಬೆಳಗೋಳ ಮೇಲುಕೋಟೆ ರಸ್ತೆಯ ಎಡಬದಿಯಲ್ಲಿ ನನ್ನ ಹಿಂದಿನಿಂದ ಕೆ.ಎ. 09 ಎಂ.ಹೆಚ್. 0619 ನ ಚಾಲಕ ಕಾರನ್ನು ಅತಿವೇಗ ಮತ್ತು ಆಜಾಕರುಕತೆಯಿಂದು ಓಡಿಸಿಕೊಂಡು ಬಂದು ನನ್ನ ಆಟೋಗೆ ಗುದ್ದಿದ ಎಂದರೆ ಸರಿಯಲ್ಲ. ಆಗ ಆಟೋ ಉರುಳಿ ಬಿದ್ದು ವೆಂಕಟೇಗೌಡರ ಬಲಗೈ ಮತ್ತು ಇತರೆ ಕಡೆ, ಚಾ.ಸಾ-2 ಮತ್ತು 3 ರವರಿಗೆ, ನನಗೆ ಪೆಟ್ಟು ಗಾಯಗಳಾಯಿತು ಎಂದರೆ ಸರಿಯಲ್ಲ. ಕಾರಿನ ಚಾಲಕ ಕಾರನ್ನು ನಿಲ್ಲಿಸದೆ ಹೊರಟು ಹೋದ ಎಂದರೆ ಸರಿಯಲ್ಲ. ನಾನು ವೆಂಕಟೇಗೌಡರನ್ನು ಅಂಬ್ಯೂಲೆನ್ಸ್ ನಲ್ಲಿ ಪಾಂಡವಪುರ ಆಸ್ಪತ್ರೆಗೆ ಕಳುಹಿಸಿಕೊಟ್ಟೆ ಎಂದರೆ ಸರಿ. ಅಲ್ಲಿ ವೈದ್ಯರು ಮೃತ ಪಟ್ಟಿರುವುದಾಗಿ ತಿಳಿಸಿಲದರು

ಎಂದರೆ ಸರಿ. ಈ ಸಂಬಂದ ಕಾರಿನ ಚಾಲಕನ ವಿರುದ್ಧ ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

**2**. ನಂತರ ದಿನಾಂಕಃ 30.01.2023 ರಂದು ನಾನು ತೋರಿಸಿದ ಕೃತ್ಯ ಸ್ಥಳದಲ್ಲಿ ಪೊಲೀಸರು ನಿಪಿ-2 ರಂತೆ ಕೃತ್ಯ ಸ್ಥಳ ಮತ್ತು ನಿಪಿ-3 ರಂತೆ ವಾಹನ ಅಮಾನತ್ತು ಮಹಜರ್ ಕ್ರಮ ಕೈಗೊಂಡು ಅಘಾತಪಡಿಸಿದ ಕಾರನ್ನು ಅಮಾನತ್ತುಪಡಿಸಿಕೊಂಡರು ಎಂದರೆ ಸರಿಯಲ್ಲ. ಆಗ ನಿಪಿ-2 ಕ್ಕೆ ಚಾ.ಸಾ-9 ಮತ್ತು 10 ರವರು ಹಾಜರಿದ್ದರು ಮತ್ತು ನಿಪಿ-3 ಮತ್ತು 4 ಕ್ಕೆ ಚಾ.ಸಾ-9 ಮತ್ತು 11 ರವರು ಹಾಜರಿದ್ದರು ಎಂದರೆ ಸರಿಯಲ್ಲ. ಈಗ ಎಲ್ಲಾ ವಿಚಾರ ಗೊತ್ತಿದ್ದರೂ ಆರೋಪಿಗೆ ಸಹಾಯವಾಗಲೆಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಆರೋಪಿ ಪರ ವಕೀಲರು ಏನು ಇಲ್ಲ ಎಂದು ತಿಳಿಸಿರುತ್ತಾರೆ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

**C/C 1** ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,
ಪಾಂಡವಪುರ.

ಸಾಕ್ಷಿದಾರರ ಸಹಿ.